ನಮ್ಮ ದೇಶದ ಹೆಮ್ಮೆಯ ಇತಿಹಾಸ ಬ್ರಿಟಿಷರ ವಿರುದ್ಧ ಹೋರಾಡಿದ ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಪೋರ್ಚುಗೀಸರ ವಿರುದ್ಧ ಹೋರಾಡಿದ ರಾಣಿ ಅಬ್ಬಕ್ಕ, ದಿಲ್ಲಿಯನ್ನು ಆಳಿದ ರಜಿಯಾ ಸುಲ್ತಾನಾ, ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 'ಆಜಾದ್ ಹಿಂದ್ ಫೌಜ್' ಸೇರಿ 'ಝಾನ್ಸಿ ರಾಣಿ ರೆಜಿಮೆಂಟ್' ಎಂಬ ಮಹಿಳೆಯರ ಸೇನೆಯನ್ನೇ ಕಟ್ಟಿ ದೇಶದ ಸ್ವಾತಂತ್ರಕ್ಕೆ ಹೋರಾಡಿದ ಕ್ಯಾಪ್ಟನ್ ಲಕ್ಷ್ಮಿ ಸೆಹಗಾಲ್‌ರಂತಹ ವೀರ ಮಹಿಳೆಯರಿಂದ ತುಂಬಿ ನಿಂತಿದೆ. ಆದರೂ ಮಹಿಳೆ ಸೇನೆ ಸೇರಲು ದೇಶಕ್ಕೆ ಸ್ವಾತಂತ್ರ ಬಂದ ಮೇಲೆ, 45 ವರ್ಷ ಕಾಯಬೇಕಾಯಿತು!

## ಸಶಸ್ತ್ರ ಸೇನೆಗೆ ಪ್ರವೇಶ

1992ರಲ್ಲಿ ಮಹಿಳೆಯರನ್ನು ಸಶಸ್ತ್ರ ಪಡೆಗೆ ಸೇರಿಸಿಕೊಳ್ಳಲು ಸರ್ಕಾರ ನಿರ್ಧರಿಸಿತು. ಪುರುಷರ ಪೌರುಷದ ರಂಗವೆನಿಸಿದ ಸೇನೆ ಮೊಟ್ಟ ಮೊದಲಿಗೆ ತನ್ನ ಪೂರ್ವಗ್ರಹವನ್ನು ತೊಡೆದು, ಮಹಿಳೆಯರಿಗೆ ಪ್ರವೇಶ ನೀಡಿತ್ತು. ಅಡ್ಮಿರಲ್ ಎಲ್. ರಾಮ್‌ದಾಸ್, ಬಾಂಬೆಯಲ್ಲಿ ಕರೆದ ಪತ್ರಕರ್ತರ ಸಭೆಯಲ್ಲಿ, ನೌಕಾಪಡೆಗೆ ಮಹಿಳೆಯರನ್ನು ಅಧಿಕೃತ ಅಧಿಕಾರಿಗಳಾಗಿ ನೇಮಿಸಿಕೊಳ್ಳುವ ನಿರ್ಧಾರವನ್ನು ತಿಳಿಸಿದ್ದರು. ತಕ್ಷಣವೇ ಪತ್ರಿಕೆಗಳಲ್ಲಿ ಜಾಹೀರಾತುಗಳು ಹೊರಬಿದ್ದವು. ವಾಯುಸೇನೆ, ಭೂಸೇನೆಗಳ ಬಾಗಿಲೂ ತೆರೆಯಿತು.

ಸಶಸ್ತ್ರ ಸೇನೆಗೆ ಪ್ರವೇಶ ಸುಲಭ ಸಾಧ್ಯವಲ್ಲ. ಆ ಪ್ರವೇಶ ಅಭ್ಯರ್ಥಿಗಳ ಅಂಕಗಳು ಹಾಗೂ ಅರ್ಹತೆಯನ್ನು ಆಧರಿಸಿತ್ತು. 'ಸರ್ವಿಸ್ ಸೆಲೆಕ್ಷನ್ ಬೋರ್ಡ್'ನ ಸುದೀರ್ಘ ಸಂದರ್ಶನದ ನಂತರ ದೈಹಿಕ ಸಾಮರ್ಥ್ಯವನ್ನೂ ನೋಡಿ ಆಯ್ಕೆ. ಮೂರು–ನಾಲ್ಕು ದಿನಗಳು ಜರುಗಿದ ಪ್ರವೇಶ ಪರೀಕ್ಷೆಯಲ್ಲಿ ಮಹಿಳಾ ಅಭ್ಯರ್ಥಿಗಳ ಯೋಗ್ಯತೆಯನ್ನು ಗುರುತಿಸಲಾಗಿತ್ತು. ಅಲ್ಲಿ ಆಯ್ಕೆಯಾದವರು ಕೇಂದ್ರ ಸರ್ಕಾರದ ಮೊದಲ ದರ್ಜೆಯ ಅಧಿಕಾರಿಗಳಾಗಲಿದ್ದರು. ಆ ಮಹಿಳೆಯರಿಗೆ ಐದರಿಂದ ಏಳು ವರ್ಷಗಳ ಸೇವಾ ಸಮಯವನ್ನು ನೀಡಿದ್ದರು. ಕೊನೆಯ ವರ್ಷದಲ್ಲಿ ಮಹಿಳೆಯರ ಕಾರ್ಯ–ಕೌಶಲವನ್ನು ನೋಡಿ, ಸೇನೆಯ ಅವಶ್ಯಕತೆಗೆ ಅನುಸಾರವಾಗಿ ಸೇವಾವಧಿಯನ್ನು ಹೆಚ್ಚಿಸುವುದಾಗಿ ಹೇಳಿದ್ದರು. ಕಾಯಂ ಕೂಡ ಆಗಿಸುವ ಸಾಧ್ಯತೆಯನ್ನು ತಿಳಿಸಿದ್ದರು.

1992ರಲ್ಲಿ ಎಲೆಕ್ಟ್ರಾನಿಕ್ ಹಾಗೂ ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಪದವಿ ಪಡೆದ ಮಹಿಳೆಯರು ವಾಯುಸೇನೆಯನ್ನು ಸೇರಿದ್ದು, ಅವರ ತರಬೇತು 1993ರಲ್ಲಿ ಆರಂಭವಾಗಿತ್ತು. ಅಖಿಲ ಭಾರತದ ಮಟ್ಟದಲ್ಲಿ ಪುರುಷರೊಡನೆ ಸ್ಪರ್ಧಿಸಿ ಆಯ್ಕೆಯಾದ ಮಹಿಳೆಯರು ಅವರಾಗಿದ್ದರು. ಪುರುಷರ ಸಂಖ್ಯೆಯನ್ನು ಮೀರಿಸಿ ನಿಂತಿದ್ದರು. 22 ಮಂದಿ ಪುರುಷರು ಆಯ್ಕೆಯಾಗಿದ್ದರೆ, 25 ಮಹಿಳೆಯರು ಆಯ್ಕೆಯಾಗಿದ್ದರು. ಅವರಲ್ಲಿ ಎಂಟು ಮಂದಿ ಕರ್ನಾಟಕದವರು ಎಂಬುದು ನಮಗೆ ಹೆಮ್ಮೆಯ ವಿಷಯವಾಗಿತ್ತು. ಬೆಂಗಳೂರಿನ ಜಾಲಹಳ್ಳಿಯಲ್ಲಿರುವ 'ವಾಯುಸೇನೆಯ ತಾಂತ್ರಿಕ ಕಾಲೇಜಿ'ನಲ್ಲಿ ಅವರ ತರಬೇತಿ ನಡೆದಿತ್ತು.

ಹೀಗೆ ಭಾರತದ ಸಶಸ್ತ್ರ ಸೇನೆ 1992ರಲ್ಲಿ ಮಹಿಳೆಯರಿಗೆ ಬಾಗಿಲು ತೆರೆದರೂ, ಅವರು ಹುದ್ದೆಯಲ್ಲಿ ಮೇಲೇರದಂತೆ, ಕಮಾಂಡರ್ ಸ್ಥಾನಕ್ಕೆ ಬಾರದಂತೆ ತಡೆ ಹಾಕಿತ್ತು. ಭೂಸೇನೆಯ ಎಸ್.ಎಸ್.ಸಿ. (ಶಾರ್ಟ್ ಸರ್ವಿಸ್ ಕಮಿಷನ್) ಮಹಿಳಾ ಅಧಿಕಾರಿಗಳು ಕಾಯಂ ಸೇವೆಯ ಅವಕಾಶ (ಪರ್ಮನೆಂಟ್ ಕಮಿಷನ್) ಮತ್ತು ಭೂಸೇನೆಯಲ್ಲಿ ಸಮಾನ ಅವಕಾಶಗಳನ್ನು ಬೇಡಿ 2003ರಲ್ಲಿ ದೆಹಲಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಿದರು. ಮಹಿಳೆಯರನ್ನು ಸೇನೆಯಲ್ಲಿ ಕಮಾಂಡರ್ ಮುಂತಾಗಿ ಕಾಯಂ ಸೇವೆಯ ಹುದ್ದೆಗಳಿಗೂ ನೇಮಕ ಮಾಡಬೇಕು ಎಂದು 2010ರಲ್ಲಿ ದೆಹಲಿ ಹೈಕೋರ್ಟ್ ಆದೇಶ ನೀಡಿತ್ತು. ಇಂತಹ ಜವಾಬ್ದಾರಿಯನ್ನು ಮಹಿಳೆಯರಿಗೆ





ಸಶಸ್ತ್ರ ಸೇನೆಯ ಮಹಿಳೆಯರೊಡನೆ ಲೇಖಕಿ (ಎಡದಿಂದ ಎರಡನೆಯವರು)



ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 'ಆಜಾದ್ ಹಿಂದ್ ಫೌಜ್' ಸೇರಿ 'ಝಾನ್ಸಿ ರಾಣಿ ರೆಜಿಮೆಂಟ್' ಎಂಬ ಮಹಿಳೆಯರ ಸೇನೆಯನ್ನೇ ಕಟ್ಟಿ ದೇಶದ ಸ್ವಾತಂತ್ರಕ್ಕೆ ಹೋರಾಡಿದ ವೀರ ಮಹಿಳೆ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್.

ಸ್ತ್ರೀ ಸೇನಾನಿ